**ದಿನಾಂಕ: 23-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಬಿ ವಿ ಎನ್ ವಕೀಲರಿಂದ ಆರೋಪಿ ಪರವಾಗಿಃ**

1) ಮಧು ಟ್ರೇಡರ್ಸ್ ತೆರೆದು 15 ವರ್ಷಗಳಾಗಿರುತ್ತದೆ. ಮಧು ಟ್ರೇಡರ್ಸ್ ನ್ನು ಹಾಸನದಲ್ಲಿ ನೋಂದಣಿ ಮಾಡಿಸಿರುತ್ತೇನೆ. ನೋಂದಣಿ ಸಂಖ್ಯೆಯನ್ನು ಹೇಳಲು ಆಗುತ್ತದೆಯಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ನೋಡದೇ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಭತ್ತವನ್ನು ರೈತರಿಂದ ಖರೀದಿಸುತ್ತೇನೆ ಎಂದರೆ ಸರಿ. ರೈತರಿಂದ ಭತ್ತವನ್ನು ಖರೀದಿಸಿದಾಗ ಬಿಲ್ ನ್ನು ಕೊಡುತ್ತೇನೆ. ಯಾವ ಯಾವ ರೈತರಿಂದ ಎಷ್ಟು ಭತ್ತವನ್ನು ಖರೀದಿಸಿ ಆರೋಪಿಗೆ ಕಳುಹಿಸಿದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ಬಿಲ್ ನೋಡಿ ಹೇಳಬೇಕು ಎಂದು ನುಡಿಯುತ್ತಾರೆ.

2) ರೈತರಿಂದ ಖರೀದಿಸಿದ ಭತ್ತದ ಬಿಲ್ ನ್ನು ಸಿ ಟಿ ಒ (ಕಮರ್ಶಿಯಲ್ ಟ್ಯಾಕ್ಸ್ ಆಫಿಸ್ ) ಗೆ ಕೊಡಬೇಕು ಎನ್ನುವುದು ಸರಿ. ಸದರಿ ಸಿ ಟಿ ಒ ಕಚೇರಿಯಲ್ಲಿ ನಾವು ನೀಡುವ ಬಿಲ್ ಗಳನ್ನು ಆಡಿಟ್ ರವರು ಪರಿಶೀಲಿಸಿ ಸೀಲು ಮತ್ತು ಸಹಿ ಹಾಕಿ ವಾಪಸ್ಸು ಕೊಡುತ್ತಾರೆ ಎಂದರೆ ಸರಿ. ಆರೋಪಿಗೆ ಭತ್ತವನ್ನು ಕಳುಹಿಸುವ ಪೂರ್ವದಲ್ಲಿ ಎಷ್ಟು ದಿನದ ಹಿಂದೆ ಭತ್ತವನ್ನು ಖರೀದಿಸಿದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ 8-10 ದಿನಗಳ ಹಿಂದೆ ಎಂದು ನುಡಿಯುತ್ತಾರೆ.

3) ಆರೋಪಿಯ ಹತ್ತಿರ 2015 ರಿಂದ ವ್ಯವಹಾರ ಶುರುವಾಗಿರುತ್ತದೆ. ಆರೋಪಿ ಮೊದಲು ನನ್ನ ಹತ್ತಿರ ವ್ಯವಹಾರ ಮಾಡುತ್ತಿರುವಾಗ ಹಣವನ್ನು ನಗದು ರೂಪದಲ್ಲಿ ನೀಡಿ ಭತ್ತವನ್ನು ತೆಗೆದುಕೊಂಡು ಹೋಗುತ್ತಿದ್ದನು. ಸಾಲದ ವ್ಯವಹಾರ ಯಾವಾಗ ಶುರು ಮಾಡಿದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ಈ ಪ್ರಕರಣದಲ್ಲಿರುವ ಇದೇ ವ್ಯವಹಾರ ಮೊದಲು ಮತ್ತು ಕೊನೆಯದು ಎಂದು ನುಡಿಯುತ್ತಾರೆ.

4) ನನ್ನ ಹತ್ತಿರ 15-20 ವರ್ಷಗಳಿಂದ ಮೊಬೈಲ್ ಇರುತ್ತದೆ. ಆರೋಪಿಯೇ ಖುದ್ದಾಗಿ ಬಂದು ಭತ್ತ ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿಯೇ ಭತ್ತ ತೆಗೆದುಕೊಳ್ಳುವಾಗ ಬಿಲ್ ನ ಮೇಲೆ ಆರೋಪಿಯ ಸಹಿ ತೆಗೆದುಕೊಂಡರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇಲ್ಲ ನಾನು

ಮಾತ್ರ ಸಹಿ ಮಾಡಿ ಬಿಲ್ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಬೇರೆ ಯಾವುದಾದರೂ ದಾಖಲೆಗಳಿಗೆ ಸಹಿ ಪಡೆದಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬಿಲ್ ಮತ್ತು ಓಚರ್ ಗಳಿಗೆ ಆರೋಪಿಯ ಸಹಿ ಪಡೆಯಲು ತೊಂದರೆ ಇಲ್ಲವಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಾವು ಆ ರೀತಿ ತೆಗೆದುಕೊಳ್ಳುವುದಿಲ್ಲ ಮತ್ತು ಸಹಿ ಪಡೆಯಲು ತೊಂದರೆ ಇರಲಿಲ್ಲ ಎನ್ನುವುದು ಸರಿ ಎಂದು ನುಡಿಯುತ್ತಾರೆ.

5) ಭತ್ತವನ್ನು ತೆಗೆದುಕೊಂಡು ಹೋಗಲು ಆರೋಪಿಯೇ ಲಾರಿ ತಂದಿದ್ದ. ನಾನು ಎ.ಪಿ.ಎಂ.ಸಿ ಬೆ ಭತ್ತ ಕಳುಹಿಸಿದ ಬಗ್ಗೆ ಯಾವುದೇ ದಾಖಲೆ ಕಳುಹಿಸಿರುವುದಿಲ್ಲ. ದಿಃ 16-09-2016 ರಂದು ಚೆಕ್ ನ್ನು ನೀಡಿರುತ್ತಾರೆ. ಚೆಕ್ ನ್ನು ನೀಡಿದ ಬಗ್ಗೆ ಬಿಲ್ ನ ಮೇಲೆ ನಮೂದಿಸಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಮಾಡಿಲ್ಲ ಎಂದು ನುಡಿಯುತ್ತಾರೆ. ಚೆಕ್ ನ್ನು ಪಡೆದುಕೊಂಡ ಸಮಯದಲ್ಲಿ ಆರೋಪಿಯಿಂದ ನಾನು ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಯ ವಿಳಾಸದ ದೃಡೀಕರಣ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ.

6) ಆರೋಪಿ ವ್ಯಾಪಾರ ಮಾಡುವ ಜಾಗಕ್ಕೆ ನಾನು ಯಾವಾಗಲೂ ಹೋಗಿರುವುದಿಲ್ಲ. ನನಗೆ ಈಗ ತೋರಿಸಿದ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಆರೋಪಿಯದ್ದಾಗಿರುತ್ತದೆ. ಸಾಕ್ಷಿ ಗುರುತಿಸಿದ ಸದರಿ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಗಳನ್ನು ನಿಡಿ 1 ಮತ್ತು 2 ಎಂದು ಗುರುತಿಸಲಾಯಿತು.

7) ನಾನು ಮುನಿಸಿಪಾಲಿಟಿಯಿಂದ ಪರವಾನಗಿ ಪಡೆದಿರುವುದಿಲ್ಲ. ನಾನು ಸಾಂಗ್ಲಿಯ ಬ್ಯಾಂಕಿಗೆ ಹೋಗಿ ವಿಚಾರಣೆ ಮಾಡಿರುವುದಿಲ್ಲ. ಆರೋಪಿಯ ವ್ಯವಹಾರ ಮತ್ತು ವ್ಯಾಪಾರದ ಬಗ್ಗೆ ಏನಾದರೂ ದಾಖಲೆ ಪಡೆದುಕೊಂಡಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇಲ್ಲ ಅವರು ಏನು ಹೇಳಿದ್ದಾರಾ ಅದನ್ನು ಬರೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ.

8) ನಿಪಿ 1 ರಲ್ಲಿರುವ ಬರವಣಿಗೆಯನ್ನು ಯಾರ ಕೈಯಲ್ಲಿ ಬರೆಸಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆರೋಪಿಯೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 4 ರಲ್ಲಿ ಆರೋಪಿಯ ಹೆಸರು ಇದೆಯಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಹೆಸರು ಇಲ್ಲ ಸಾಯಿ ಎಂಟರ್ ಪ್ರೈಸಸ್ ಎಂದು ಇದೆ ಎಂದು ನುಡಿಯುತ್ತಾರೆ. ನಿಪಿ 4 ರಲ್ಲಿ ಯಾವ ಜಾತಿಯ ಭತ್ತ ಎಂದು ಬರೆದಿಲ್ಲ ಎಂದರೆ ಸರಿ. ನಿಪಿ 4 ರಲ್ಲಿ ಖರೀದಿಸಿದವರ ಸಹಿ ಇಲ್ಲ ಎಂದರೆ ಸರಿ.

9) ಭತ್ತವನ್ನು ಲೋಡ್ ಮಾಡಿದ ಲಾರಿಯ ಚಾಲಕನ ಸಹಿಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಿಪಿ 4 ರ ಹಿಂಭಾಗದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಿಪಿ 4 ರಲ್ಲಿ ದಿನಾಂಕ ಇಲ್ಲ ಮತ್ತು ಲಾರಿಯ ಮಾಲೀಕರ ಹೆಸರು, ವಿಳಾಸ ನಮೂದಿಸಿಲ್ಲ ಎಂದರೆ ಸರಿ.

10) ನೋಟೀಸ್ ನ್ನು ಸಾಯಿ ಎಂಟರ್ ಪ್ರೈಸಸ್ ಕುಕ್ ವಾಡ, ಎಂ ಐ ಡಿ ಸಿ ಸಾಂಗ್ಲಿ ವಿಳಾಸಕ್ಕೆ ಕಳುಹಿಸಿರುತ್ತೇನೆ. ದಿಃ 26-03-2017 ರಂದು ನೋಟೀಸ್ ನ್ನು ಕಳುಹಿಸಿರುತ್ತೇನೆ. ನೋಟೀಸ್ ಕಳುಹಿಸಿದ ಬಗ್ಗೆ ಸ್ವೀಕೃತಿ ಬಂದಿರುತ್ತದೆ. ಸದರಿ ಸ್ವೀಕೃತಿಯಲ್ಲಿ ಆರೋಪಿಯ ಸಹಿ ಇದೆ ಎಂದು ಸೂಚಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂಚೆ ಇಲಾಖೆಗೆ ನಾನು ಅರ್ಜಿ ನೀಡಿರುವುದಿಲ್ಲ. ನಿಮ್ಮ ವಕೀಲರ ಮುಖಾಂತರ ಅಂಚೆ ಇಲಾಖೆಗೆ ಅರ್ಜಿ ಕೊಟ್ಟಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಎಷ್ಟನೇ ತಾರೀಖಿನೊಂದು ನೋಟೀಸ್ ಪಡೆದಿರುತ್ತಾನೆಂದು ಗೊತ್ತಾಯಿತ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಷ್ಟನೇ ತಾರೀಖು ನೋಟೀಸ್ ಜಾರಿಯಾಗಿರುತ್ತದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಮ್ಮ ಲಾಯರ್ ಗೆ ಗೊತ್ತು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಷ್ಟು ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಿದ್ದೇನೆ ಎಂದು ಹೇಳಲು ನನಗೆ ಆಗುವುದಿಲ್ಲ.

11) ದಿಃ 16-09-2016 ರ ನಂತರ ನಿಮ್ಮ ಖಾತೆಗೆ ಆರೋಪಿ ಖಾತೆಯಿಂದ ಏನಾದರೂ ಹಣ ಜಮಾ ಆಗಿದೆಯಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ

ಯಾವ ದಾಖಲೆಗಳನ್ನು ಕೊಟ್ಟಿದ್ದೀರಿ ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಬಿಲ್ ಎಲ್ಲ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

12) ದಿಃ 13-02-2017 ರಂದು ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಬಹುದು.

ಪಾಟೀ ಸವಾಲಿಗೊಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .